# ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006.

ಸಂಖ್ಯೆ ಕರಾಮುವಿ/ಆವಿ/ಸಿಬ್ಬಂದಿ-2/967/2022-23 ದಿನಾಂಕ: 28.07.2022

## ದರ ಪಟ್ಟಿ ಆಹ್ವಾನ ಪ್ರಕಟಣೆ

**ವಿಷಯ:** ವಿಶ್ವವಿದ್ಯಾನಿಲಯದಲ್ಲಿ ನೌಕರರುಗಳಿಗೆ ಗುರುತಿನ ಚೀಟಿ (I.D Card) ಸಿದ್ಧಪಡಿಸಿ ಸರಬರಾಜು ಮಾಡುವ ಸಂಬಂಧ "ದರ ಪರಪಟ್ಟಿ" ಕೋರಿ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.07.2022.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದೋನ್ನತಿ ಹೊಂದಿದ ಖಾಯಂ ನೌಕರರು/ಸಹಾಯಕ ಪ್ರಾಧ್ಯಾಪಕರು(ಗುತ್ತಿಗೆ ಆಧಾರ)/ಕಾಲಿಕ ವೇತನ ಶ್ರೇಣಿ/ತಾತ್ಕಾಲಿಕ ನೌಕರರುಗಳಿಗೆ ಸುಮಾರು ಅಂದಾಜು 500 ರಿಂದ 600 ಗುರುತಿನ ಚೀಟಿ (I.D Card) ಯನ್ನು ವಿ.ವಿ ನಿಲಯದ ವತಿಯಿಂದ ವಿತರಿಸಲು ಉದ್ದೇಶಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕೆಳಕಂಡ ಮಾದರಿಯಲ್ಲಿ ಅಂದಾಜು 500 ರಿಂದ 600 ಗುರುತಿನ ಚೀಟಿ (I.D Card)ಗಳನ್ನು ಸಿದ್ಧಪಡಿಸಿ ಅಗತ್ಯ ಪರಿಕರಗಳೊಂದಿಗೆ ಸರಬರಾಜು ಮಾಡುವ ಸಂಬಂಧ ಅಧಿಕೃತ/ತಯಾರಕ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದ್ದು, ಒಂದು ಗುರುತಿನ ಚೀಟಿ (I.D Card)ಗೆ ತಗಲುವ ವೆಚ್ಚದ ಕನಿಷ್ಠ ದರವನ್ನು (ಎಲ್ಲಾ ತೆರಿಗೆಗಳೂ ಸೇರಿದಂತೆ) ನಮೂದಿಸಿ ಮೊಹರು ಮಾಡಿದ ಲಕೋಟೆಯ ಮೇಲೆ **"ಗುರುತಿನ ಚೀಟಿ (I.D Card) ಸರಬರಾಜಿಗೆ ಸಂಬಂಧಿಸಿದ ದರಪಟ್ಟಿ"** ಎಂಬ ಮೇಲ್ಬರಹದೊಂದಿಗೆ, **ಕುಲಸಚಿವರು, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು ಇವರಿಗೆ ಖುದ್ದಾಗಿ/ಅಂಚೆ ಮೂಲಕ ದಿನಾಂಕ: 06.08.2022 ರೊಳಗೆ ಸಲ್ಲಿಸಲು ಕೋರಲಾಗಿದೆ ಹಾಗೂ ಅಂಚೆ ವಿಳಂಬಕ್ಕೆ ವಿಶ್ವವಿದ್ಯಾನಿಲಯ ಜವಾಬ್ದಾರಿಯಾಗಿರುವುದಿಲ್ಲ.**

### Description/Elements of I D Card

1. PVC Card 500° Fussing process, Heat & Cooling(ATM Quality)
2. Size: H-8.5cm, W-5.3cm Finishing Size, Curve Cut
3. Plastic Transparent Holder
4. Stain Tag with Print: KSOU

ಆದೇಶದ ಮೇರೆಗೆ,

(ಸಹಿ)

ಕುಲಸಚಿವ

ಪ್ರತಿ,

1. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಡಾ. ನವೀನ್ ಕುಮಾರ್ .ಸಿ.ಜಿ, ನೋಡಲ್ ಆಫಿಸರ್, ವೆಬ್ ಸೈಟ್, ಕರಾಮುವಿ, ಮೈಸೂರು – ಇವರಿಗೆ ಈ ಪ್ರಕಟಣೆಯನ್ನು ವಿ.ವಿ ನಿಲಯದ ಅಧಿಕೃತ ವೆಬ್ ಸೈಟ್‌ನಲ್ಲಿ ದಿನಾಂಕ: 06.08.2022 ವರೆಗೆ ಪ್ರಕಟಿಸಲು ತಿಳಿಸಲಾಗಿದೆ.
4. ಕಚೇರಿ ಪ್ರತಿ.